# ಪತಂಗದಿಂದ ರೇಷ್ಮೆಯತನಕ...

ರೇಷ್ಮೆಯೆಂದರೆ ಹೊಳಪು. ದಟ್ಟ ವರ್ಣಗಳ ಸಂಗಮ. ತೇವವನ್ನು ಹೆಚ್ಚು ಪ್ರಮಾಣದಲ್ಲಿ ಹೀರಿಕೊಳ್ಳುವ ಗುಣವಿದೆ. ಮೃದುವಾಗಿ ಹಗುರವಾಗಿದ್ದರೂ ಉಕ್ಕಿನ ತಂತಿಗಿಂತ ಗಟ್ಟಿ. ಉಷ್ಣಾಂಶವನ್ನು ಹೀರಿಕೊಳ್ಳುವ ಗುಣವಿಲ್ಲ, ಹೀಗಾಗಿ ಬೇಸಿಗೆಯಲ್ಲಿ ತಂಪು, ಚಳಿಗಾಲದಲ್ಲಿ ಬೆಚ್ಚಗಿನ ಅನುಭವ ನೀಡುವ ವಿಶಿಷ್ಟ ವಸ್ತ್ರ ಈ ರೇಷ್ಮೆ. ಇಂತಹ ಉತ್ಕೃಷ್ಟ ಗುಣ ರೇಷ್ಮೆಗೆ ಬಂದಿರುವುದು ರೇಷ್ಮೆ ಹುಳು ಹೊರಡಿಸುವ ಪ್ರೊಟೀನ್‌ಯುಕ್ತ ಎಳೆಯಿಂದ.

ನೈಸರ್ಗಿಕ ರೇಷ್ಮೆಯಲ್ಲಿ ಮುಖ್ಯವಾಗಿ ನಾಲ್ಕು ವಿಧ. (ಓಕ್ ಟಸ್ಸಾರ್ ಸೇರಿ ಐದು ವಿಧ ಎಂಬ ಹೇಳಿಕೆಯೂ ಇದೆ). ವಿವಿಧ ದೇಶಗಳಲ್ಲಿ ಬೆಳೆಯುವ ಹೆಚ್ಚಿನ ಪ್ರಮಾಣದ ರೇಷ್ಮೆಯೆಂದರೆ ಹಿಪ್ಪುನೇರಳೆ ರೇಷ್ಮೆ (ಮಲ್ಬರಿ ಸಿಲ್ಕ್). ಉಳಿದವುಗಳೆಂದರೆ ಟಸ್ಸಾರ್, ಎರಿ ಹಾಗೂ ಮುಗಾ.





## ಮಲ್ಬರಿ ರೇಷ್ಮೆ

ಬಾಂಬಿಕ್ಸ್ ಮೋರಿ ತಳಿಯ ರೇಷ್ಮೆ ಹುಳುಗಳು ಹಿಪ್ಪುನೇರಳೆ ಎಲೆಯನ್ನು ತಿಂದು ಈ ರೇಷ್ಮೆ ಎಳೆ ಹೊರಡಿಸುತ್ತವೆ. ಈ ಹುಳುಗಳನ್ನು ಒಳಾಂಗಣದಲ್ಲೇ ಬೆಳೆಯಲಾಗುವುದು. 'ಭಾರತದಲ್ಲಿ ಇದನ್ನು ಬೆಳೆಯುವ ಪ್ರಮುಖ ರಾಜ್ಯಗಳೆಂದರೆ ಕರ್ನಾಟಕ, ಆಂಧ್ರಪ್ರದೇಶ, ಪ.ಬಂಗಾಳ, ತಮಿಳುನಾಡು, ಜಮ್ಮು ಮತ್ತು ಕಾಶ್ಮೀರ' ಎನ್ನುತ್ತಾರೆ ಸಿಲ್ಕ್ ಮಾರ್ಕ್‌ನ ಸಿಇಒ ಕೆ.ಸುಕುಮಾರ್ ಮೆನನ್

ರೇಷ್ಮೆ ಹುಳುವಿನ ಜೀವನ ಚಕ್ರ ಒಟ್ಟು ನಾಲ್ಕು ಹಂತಗಳನ್ನು ಒಳಗೊಂಡಿದೆ. ಮೊಟ್ಟೆ, ಲಾರ್ವಾ, ಪ್ಯುಪಾ ಹಾಗೂ ವಯಸ್ಕ ಪತಂಗ. ಹೆಣ್ಣು ಪತಂಗವನ್ನು ಗಂಡು ಪತಂಗ ಸೇರುವುದು ಹೆಣ್ಣು ಪತಂಗ ಹೊರಡಿಸುವ ಫೆರೊಮೋನ್ ಎಂಬ ವಾಸನಾದ್ರವ್ಯದ ಜಾಡು ಹಿಡಿದು. ಹೆಣ್ಣು ಪತಂಗ ಒಮ್ಮೆ ನೂರಾರು ಮೊಟ್ಟೆಗಳನ್ನು ಇರಿಸುತ್ತದೆ. ಕೇಂದ್ರ ರೇಷ್ಮೆ ಮಂಡಳಿ ಹಾಗೂ ಕೆಲವು ಖಾಸಗಿ ಸಂಸ್ಥೆಗಳು ಈ ಮೊಟ್ಟೆಗಳನ್ನು ಮಾರುತ್ತವೆ. 14 ದಿನಗಳ ನಂತರ ಮೊಟ್ಟೆ ಒಡೆದು ಲಾರ್ವಾ ಹೊರಬರುತ್ತದೆ. ಇದಕ್ಕೆ ಚಾಕಿ ಕಟ್ಟುವುದು ಎಂಬ ಹೆಸರಿದೆ. ಅಲ್ಲಿಯವರೆಗೂ ಬೆಚ್ಚನೆಯ ವಾತಾವರಣ ಬೇಕು. ಆರಂಭದಲ್ಲಿ ಈ ಸಣ್ಣ ಗಾತ್ರದ ಹುಳುಗಳಿಗೆ ಸಣ್ಣಗೆ ಕತ್ತರಿಸಿದ ಎಳೆಯ ಹಿಪ್ಪುನೇರಳೆ ಸೊಪ್ಪನ್ನು ಆಹಾರವಾಗಿ ನೀಡಬೇಕು.

ಈ ಹುಳುಗಳಿಗೆ ಇಡೀ ದಿನ ಸೊಪ್ಪು ತಿನ್ನುವುದೇ ಕೆಲಸ. ಹಿಪ್ಪುನೇರಳೆ ಸೊಪ್ಪಿನಲ್ಲಿರುವ ಸಿಎಸ್– ಜಾಸ್ಮೋನ್ ಎಂಬ ವಾಸನಾದ್ರವ್ಯ ಹುಳುಗಳನ್ನು ಆಕರ್ಷಿಸುತ್ತದೆ ಎನ್ನುತ್ತಾರೆ ವಿಜ್ಞಾನಿಗಳು. ಹುಳುವಿನ ತಲೆ ಕಪ್ಪು ಬಣ್ಣಕ್ಕೆ ತಿರುಗಿದಾಗ ಅವು ಜ್ವರಕ್ಕೆ ಕೂತಿವೆ ಎಂದರ್ಥ. ಆಗ ಅವು ಸೊಪ್ಪು ತಿನ್ನುವುದನ್ನು ನಿಲ್ಲಿಸುತ್ತವೆ. ದೇಹದ ಚರ್ಮದ ಪೊರೆಯನ್ನು ಆಚೆ ಹಾಕುತ್ತವೆ. ರೇಷ್ಮೆ ಹುಳು ಒಟ್ಟು ನಾಲ್ಕು ಹಂತಗಳಲ್ಲಿ ಜ್ವರಕ್ಕೆ ಕೂಡ್ರುತ್ತದೆ. ಭಾರತದಲ್ಲಿ ಬೆಳೆಯುವ ಬೈವೋಲ್ಟೀನ್ ತಳಿಯ ಹುಳುಗಳು ಬಿಳಿ ಬಣ್ಣದವು. ಬೆನ್ನಿನ ಮೇಲೆ ಸಣ್ಣ ಮುಳ್ಳಿನಂಥ ರಚನೆಯಿರುತ್ತದೆ. ಪ್ರತಿ ಹಂತದ ಜ್ವರ ಮುಗಿದ ಮೇಲೂ ನೀಡುವ ಸೊಪ್ಪಿನ ರೀತಿಯೂ ಬೇರೆಯದೇ ಆಗಿರಬೇಕು. ಅಂದರೆ ಬೆಳೆದ ಸೊಪ್ಪುಗಳನ್ನು ನೀಡಬೇಕಾಗುತ್ತದೆ.

ಪ್ರತಿ ದಿನವೂ ಹುಳುಗಳಿರುವ ಬಿದಿರು ತಟ್ಟೆಯನ್ನು ಶುಚಿಗೊಳಿಸಬೇಕಾಗುತ್ತದೆ. ತಟ್ಟೆಗೆ ಬಲೆಯನ್ನು ಹಾಕಿದರೆ ಹುಳುಗಳು ಹಾಕುವ ಹಿಕ್ಕೆ ತಟ್ಟೆಯಲ್ಲಿ ಉಳಿಯುತ್ತದೆ. ಹೀಗಾಗಿ ತಟ್ಟೆಗಳನ್ನು ಬದಲಿಸುವುದು ಸುಲಭ. ಶುಚಿಯಾಗಿ ಇಡದಿದ್ದರೆ ತೇವಾಂಶ ಜಾಸ್ತಿಯಾಗಿ ಫಂಗಸ್ ಸೋಂಕು ಉಂಟಾಗಿ ರೋಗ ಬರುವ ಸಾಧ್ಯತೆ ಅಧಿಕ. ಜೊತೆಗೆ ಊಜಿ ನೊಣಗಳೂ ದಾಳಿಯಿಡುತ್ತವೆ.

ನಾಲ್ಕನೇ ಜ್ವರದ ನಂತರ ಅಂದರೆ ಮೊಟ್ಟೆಯೊಡೆದು ಲಾರ್ವಾ ಹೊರಬಂದ 28–30 ದಿನಗಳಲ್ಲಿ ರೇಷ್ಮೆ ಹುಳು ಸ್ವಲ್ಪ ಹಳದಿ ಬಣ್ಣಕ್ಕೆ ತಿರುಗಿ ದೇಹ ಸ್ವಲ್ಪಮಟ್ಟಿಗೆ ಪಾರದರ್ಶಕವಾಗುತ್ತದೆ. ಹುಳುವಿನ ಬಾಯಿಯಿಂದ ಎಳೆ ಬರಲು ಶುರುವಾಗುತ್ತದೆ. ಇದನ್ನು ಸ್ಥಳೀಯವಾಗಿ 'ಹುಳು ಹಣ್ಣಾಗುವುದು' ಎಂದು ಹೇಳುವುದು ವಾಡಿಕೆ. ಆಗ ಹುಳುಗಳನ್ನು ಬಿದಿರಿನ ಚಂದ್ರಿಕೆಗೆ ವರ್ಗಾಯಿಸಬೇಕು. ಅಂದರೆ ಅದಕ್ಕೆ ಗೂಡು ಕಟ್ಟಲು ಆಧಾರ ಒದಗಿಸಬೇಕು. ಸುಮಾರು 24– 36 ಗಂಟೆಗಳೊಳಗೆ 500– 900 ಮೀಟರ್ ಉದ್ದವಿರುವ ಎಳೆಯಿಂದ ಈ ಗೂಡು ತಯಾರಾಗಿ ಒಳಗಡೆ ಪ್ಯುಪಾ ಅವಸ್ಥೆಯಲ್ಲಿರುವ ಹುಳು ಇರುತ್ತದೆ. ಒಂದು ಪೌಂಡ್ ರೇಷ್ಮೆ ದಾರ ತೆಗೆಯಲು 2000– 3000 ಗೂಡುಗಳು ಬೇಕು.

ಗೂಡನ್ನು ನೀರಿನಲ್ಲಿ ಬೇಯಿಸಿ ಒಳಗಿರುವ ಪ್ಯುಪಾವನ್ನು ಸಾಯಿಸಲಾಗುತ್ತದೆ. ಇಲ್ಲದಿದ್ದರೆ ಅದು ಪತಂಗವಾಗಿ ಗೂಡು ಒಡೆದುಕೊಂಡು ಹೊರಬರುತ್ತದೆ. ಇದರಿಂದ ರೇಷ್ಮೆ ಎಳೆ ತುಂಡಾಗಿ ಹಾಳಾಗಿಬಿಡುತ್ತದೆ. ಜೊತೆಗೆ ಬಿಸಿ ನೀರಿನಿಂದಾಗಿ ಗೂಡಿನಿಂದ ಎಳೆಗಳನ್ನು ಬಿಡಿಸುವುದೂ ಸುಲಭ.



■ ಎಸ್ಸೆಚ್

**ಮೇಲಿನ ಲೇಖನ ಓದಿ ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ. ಸರಿಯುತ್ತರ ನೀಡಿದ ಹತ್ತು ಮಂದಿಗೆ ತಲಾ ಒಂದು ಶುದ್ಧ ರೇಷ್ಮೆ ಸೀರೆ ಬಹುಮಾನ!**

▸ **ರೇಷ್ಮೆ ಹುಳು ಹೊರಡಿಸುವ ಎಳೆಯಲ್ಲಿರುವ ಅಂಶ ಯಾವುದು?**

(ನಿಮ್ಮ ಉತ್ತರವನ್ನು– ಮ್ಯಾನೇಜರ್, ಜಾಹೀರಾತು ವಿಭಾಗ, (ರೇಷ್ಮೆ ಸೀರೆ ಸ್ಪರ್ಧೆ), ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ., 75, ಮಹಾತ್ಮಾ ಗಾಂಧಿ ರಸ್ತೆ, ಬೆಂಗಳೂರು–560001, ಇಲ್ಲಿಗೆ ನವೆಂಬರ್ 25ರೊಳಗೆ ಕಳುಹಿಸಿ– ಸಂ.)

ಬಹುಮಾನಗಳ ಪ್ರಾಯೋಜಕರು: **ಅರ್ಪಿತದೀಪಂ, ಚಿಕ್ಕಪೇಟೆ, ಬೆಂಗಳೂರು.**

(ಸೂಚನೆ: ಉತ್ತರ ಕಳುಹಿಸುವವರು ತಮ್ಮ ಮೊಬೈಲ್ ಸಂಖ್ಯೆಯನ್ನು ನಮೂದಿಸುವುದು ಕಡ್ಡಾಯ. ಸ್ಪರ್ಧೆಯಲ್ಲಿ ಟಿಪಿಎಂಎಲ್, ಸಿಲ್ಕ್‌ಮಾರ್ಕ್, ಪ್ರಾಯೋಜಕರ ಕುಟುಂಬದವರು ಮತ್ತು ಸಂಬಂಧಿಕರು ಪಾಲ್ಗೊಳ್ಳುವಂತಿಲ್ಲ. ಬಹುಮಾನಗಳನ್ನು ಪ್ರಾಯೋಜಕರ ಷೋರೂಂನಲ್ಲಿ ನೀಡಲಾಗುವುದು).

SILK MARK
Your Assurance of Pure Silk